**ಕರ್ನಾಟಕ ಸರ್ಕಾರ**

ಸಂ.ಡಿಟಿಇ/10/ಎಸ್‌ಸಿಹೆಚ್(1)/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ: 02-11-2019.

**-:: ಸುತ್ತೋಲೆ ::-**

**ವಿಷಯ :** ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ದಾಖಲೆಗಳನ್ನು ಇ-ದೃಢೀಕರಣ (e-Attestation) ಮಾಡಲು ಅಧಿಕಾರಿಗಳನ್ನು ನೇಮಿಸಿ, ವಿವರಗಳನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ :** ಮಾನ್ಯ ಉಪ ಮುಖ್ಯಮಂತಿಗಳು (ಉನ್ನತ ಶಿಕ್ಷಣ, ವೈದ್ಯಕೀಯ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ), ವಿಕಾಸಸೌಧ, ಬೆಂಗಳೂರು ಇವರ ಅ.ಸ.ಪ ಸಂಖ್ಯೆ: ಉಮು/ಉಶಿ,ವೈಶಿ,ಐಟಿ&ಬಿಟಿ,ವಿ&ತಂ/ /2019-20, ದಿ: 30-10-2019.

-0000000-

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ 2019-20ನೇ ಸಾಲಿನಿಂದ ವಿದ್ಯಾರ್ಥಿಗಳು ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವಿದ್ಯಾರ್ಥಿವೇತನವನ್ನು ಪಾವತಿಸಲು ಇ-ಆಡಳಿತ ಕೇಂದ್ರ ಅಭಿವೃದ್ಧಿ ಪಡಿಸಿರುವ "ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ" (State Scholarship Portal for Post Matric) ಮೂಲಕ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಹಾಗೂ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಸಲ್ಲಿಸಿರುವ ದಾಖಲೆಗಳನ್ನು ದೃಢೀಕರಿಸಲು "ಇ-ದೃಢೀಕರಣ" (E-Attestation) ಎಂಬ ಪ್ರಕ್ರಿಯೆಯನ್ನು ಸಹ ಪರಿಚಯಿಸಲಾಗಿರುತ್ತದೆ. ಅದರಂತೆ ವಿದ್ಯಾರ್ಥಿಗಳ ದಾಖಲೆಗಳನ್ನು "ಇ-ದೃಢೀಕರಣ" ಮಾಡಲು ಆಯಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು **05 ಅಧಿಕಾರಿಗಳನ್ನು "ಇ-ದೃಢೀಕರಣ ಅಧಿಕಾರಿ"** (E-Attestation Officer) ಎಂದು ನೇಮಿಸಬೇಕಾಗಿರುತ್ತದೆ.

ಆದ್ದರಿಂದ ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ **ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರ ಜೊತಗೆ ಇನ್ನೂ ಕನಿಷ್ಠ 04 ಅಧಿಕಾರಿಗಳ ವಿವರಗಳನ್ನು** ಈ ಕೆಳಗೆ ತಿಳಿಸಿರುವಂತೆ ಭರ್ತಿ ಮಾಡಿ, **ದಿನಾಂಕ:** 06-11-2019ರ ಒಳಗಾಗಿ ಇ-ಮೇಲ್ ಐ.ಡಿ: **dteschscst@gmail.com** ಗೆ ಕಡ್ಡಾಯವಾಗಿ ಕಳುಹಿಸುವುದು ಹಾಗೂ Hard Copy ಯನ್ನು ಸಹ ಅತೀ ಜರೂರಾಗಿ ಈ ಕಛೇರಿಗೆ ಸಲ್ಲಿಸುವುದು.

**Polytechnic Name:**

**District : ........................................ Taluk :........................................**

**AISHE CODE :**

| Name of the Officer | Designation (Principal, Registar, Lecturers) | Name as in Aadhaar Card | Aadhaar Card No. | Mobile No. as in Aadhar | E-Mail I.D | Photo Copy of Aadhaar Card (Yes/No) |
|---|---|---|---|---|---|---|
| | | | | | | |
| | | | | | | |

**ನಿರ್ದೇಶಕರು**

**ಇವರಿಗೆ,**

1. ಪ್ರಾಂಶುಪಾಲರು, ಎಲ್ಲಾ ಸರ್ಕಾರಿ,ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್‌ಗಳು - ಇವರ ಗಮನಕ್ಕಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಸಂಯೋಜನಾಧಿಕಾರಿಯವರು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. (ವೆಬ್‌ಸೈಟ್ ನಲ್ಲಿ ಪ್ರಚುರ ಪಡಿಸುವುದು)